ಸರಿಹೋಯಿತಾದರೂ, ದೂರದಿಂದ ಬಂದವನೊಬ್ಬ ನಮ್ಮ ಜಾತಿಯ ಹುಡುಗಿಯನ್ನು ಬುಟ್ಟಿಗೆ ಹಾಕಿಕೊಂಡು ನಮ್ಮ ಮೇಲೆ ದೊಡ್ಡಸ್ತಿಕೆ ತೋರಿಸ್ತಾನಲ್ಲ ಎಂದು ತನ್ನೊಳಗೆ ದ್ವೇಷವನ್ನು ಹೆಪ್ಪುಗಟ್ಟಿಕೊಂಡ ವಿಷ್ಣು ನಾಯಕ. ಈ ನಡುವೆ ಕಾಲೇಜಿನ ನೆಂದ ಗೋಡೆಗಳ ಮೇಲೆ ದೇವ್–ಉಷಾ ಅಂತ ಬರೆದ ದಪ್ಪ ಅಕ್ಷರಗಳು ರಾರಾಜಿಸಿದವು. ನೋಟೀಸ್ ಬೋರ್ಡಿನಲ್ಲಿ, ದೇವರಾಜ ಉಷಾಳನ್ನು ಅಪ್ಪಿಕೊಂಡಂತಿದ್ದ ಭಾವಚಿತ್ರವೂ ಅಂಟಿಸಲ್ಪಟ್ಟು ಗೋಪಾಲ ನಾಯಕರು ಕಾಲೇಜಿಗೆ ಧಾವಿಸಿ ಬಂದರು. 'ಇದೆಲ್ಲ ತರವಲ್ಲ, ಮಗಳಿಗೆ ಬುದ್ಧಿ ಹೇಳಿ' ಅಂತ ಶೆಟಗೇರಿಯವರಿಂದ ಬುದ್ಧಿ ಹೇಳಿಸಿಕೊಂಡ ಮೇಲೆ ಗೋಪಾಲ ನಾಯಕರು ಚಿಂತೆಗೀಡಾದರು.

ದೇವರಾಜ ಮುಂಗೋಪಿ. ಭೌತಶಾಸ್ತ್ರದ ಪ್ರಯೋಗಾಲಯದಲ್ಲಿ ವಿಷ್ಣು ನಾಯಕನನ್ನು ಕೆಡವಿ ಹಂದಿಮರಿಯಂತೆ ಉರುಳು ಹಾಕಿ ಎದೆ ಮೇಲೆ ಕೂತು, 'ಫೋಟೊ ನೆಗೆಟಿವ್ಸ್ ಕೊಡು. ಇಲ್ಲದಿದ್ದರೆ ಸಾಯಿಸ್ತೀನಿ' ಎಂದು ಕುತ್ತಿಗೆ ಮೆಟ್ಟಿ ಹಿಚುಕಲಾರಂಭಿಸಿದ. ವಿಷ್ಣು ನಾಯಕ ಕೈಕಾಲು ಒದರುತ್ತಾ ಗೊರಗೊರ ಅನ್ನುವಾಗ ಯಾರೊಬ್ಬ ಗೆಳೆಯನೂ ಸಹಾಯಕ್ಕೆ ಬರಲಿಲ್ಲ. 'ನೆಗೆಟಿವ್ಸ್ ಕೊಡೀನಿ' ಅಂತ ಒಪ್ಪಿಕೊಂಡು ದೇವರಾಜನಿಂದ ಬಿಡಿಸಿಕೊಂಡು ಲಾಗ್‌ಬುಕ್‌ನಲ್ಲಿ ರಟ್ಟಿನ ಹಿಂಬದಿಯಲ್ಲಿಟ್ಟಿದ್ದ ನೆಗೆಟಿವ್‌ಗಳನ್ನು ಕೊಟ್ಟ.

ಸಂಜೆ ಉಷಾ – ದೇವರಾಜ ಇಬ್ಬರೂ ತಮ್ಮ ಭಾವಚಿತ್ರಗಳನ್ನು ಕಂಡು ವಿಸ್ಮಯಪಟ್ಟು, ಬೀಚಿನಲ್ಲೋ ಟ್ರಿಪ್‌ನಲ್ಲೋ ತೆಗೆದಿದ್ದಾನೆ ಅಂತ ಊಹಿಸಿಕೊಳ್ಳುತ್ತಾ ಹಳೆಯ ದೋಣಿಯ ಮೇಲೆ ಮೌನವಾಗಿ ಕುಳಿತುಬಿಟ್ಟರು. ಅವರವರ ಮನೆಗಳಲ್ಲಿ ಅಂದು ಸಂಜೆ ತಮ್ಮ ಜೀವನದ ಗತಿಗೆ ಸಮರ್ಥನೆ ಕೊಡಬೇಕಿತ್ತು. ಎಲ್ಲಿಯಾದರೂ ಓಡಿ ಹೋಗುವ ಎಂಬ ಯೋಚನೆ ಬಂತು. ಆದರೆ ಎಲ್ಲಿಗೆ? ಉತ್ತರ ದೊರಕಲಿಲ್ಲ. ಕಡಲು ಹುಚ್ಚೆದ್ದು ಭರತನಾಟ್ಯವನ್ನು ಬಿಟ್ಟು ಕಾಲಭೈರವನಂತೆ ಕುಣಿಯುತ್ತಿತ್ತು. ಎಷ್ಟೋ ಹೊತ್ತು ಪರಸ್ಪರ ಅಪ್ಪಿಕೊಂಡು ಹಾಗೆಯೇ ಕುಳಿತುಬಿಟ್ಟರು.

...ಕತ್ತಲು ಪೂರ್ಣ ಆವರಿಸಿತು. ದೇವರಾಜನ ಎದೆಗೊರಗಿ ಉಷಾ ಕನವರಿಸಿದಳು "ಏನು ಮಾಡುವುದು?..." ದೇವರಾಜ ಸುಮ್ಮನಿದ್ದ. ಸ್ವಲ್ಪ ಹೊತ್ತು ಬಿಟ್ಟು "ನಮ್ಮ ಬಯಲುಸೀಮೆಗೆ ಬರ್ತಿಯಾ ?" ಎಂದ. ಸಮ್ಮತಿ ಸೂಚಿಸಿದಳು. 'ಆದರೆ...' ದೇವರಾಜ ತಡೆದು ಮತ್ತೆ ಹೇಳಿದ. "ನಂಗೆ ಈಗ ಮಳೆ, ಸಮುದ್ರ, ನೀರು, ಕಾಡು ಎಲ್ಲವೂ ಬಿಡಲಾರದಷ್ಟು ಅಂಟಿಕೊಂಡಿವೆ. ನಮ್ಮೂರಿನಲ್ಲಿ ಬರೇ ಬಿಸಿಲು. ಬೋಳಾದ ಬಯಲು, ಚಿಂದಿ ಬಟ್ಟೆಯುಟ್ಟ ರೈತರು. ವರ್ಷಕ್ಕೊಮ್ಮೆ ಕಾಲರಾ ಬರ್ತದೆ. ಕುಡಿಯುವ ನೀರಿಗೆ ಮೈಲಿಗಟ್ಟಲೆ ನಡೆಯಬೇಕು. ಅಲ್ಲಿಗೆ ಹೋದರೆ ನಾವಿಬ್ಬರು ಸತ್ತೇ ಹೋಗ್ತೀವಿ. ಈ ಸಮುದ್ರ ನೋಡ್ತಾ ಒಂದಿನಾ ಪೂರ್ತಿ ಊಟಾ ಇಲ್ದೆ ಇರಬಹುದು. ನಾವು ಕಾರವಾರ ಬಿಟ್ಟು ಹೋಗೋದು ಬ್ಯಾಡ."

ಇಬ್ಬರೂ ಮೇಲೆದ್ದರು. ಉಷಾಳ ಮನೆಯವರೆಗೆ ಜೊತೆಯಲ್ಲಿಯೇ ಬಂದ ದೇವರಾಜ. ಗೇಟಿನ ಬಳಿಯೇ ಶಥಪಥ ಸುತ್ತುತ್ತಿದ್ದ ಗೋಪಾಲ ನಾಯಕರನ್ನು ಕಂಡು ತಟ್ಟನೆ ನಿಂತ. ಅವರಿಗೆ ಕಾಣುವಂತೆ ಉಷಾಳ ಹಣೆಗೊಮ್ಮೆ ಚುಂಬಿಸಿ 'ಗುಡ್ ನೈಟ್' ಹೇಳಿ ತನ್ನ ಮನೆ ಕಡೆಗೆ ಆವೇಶದಿಂದ ನಡೆದ.

ಗೋಪಾಲ ನಾಯಕರು ನೋಡಿದರು. ತನ್ನ ಮಗಳಿಗೆ ಹುಡುಗನೊಬ್ಬ ಚುಂಬಿಸಿಬಿಟ್ಟ! ಒಂದು ಕ್ಷಣ ಉದ್ವೇಗಗೊಂಡರೂ ಮತ್ತೆ ಸಂಯಮ ತಂದುಕೊಂಡರು. ಮನಸ್ಸು ಹಲವು